**ಎಸ್ ಸಿ ನಂ.49/2024**

CW.13 , PW.10

**ಆರೋಪಿತರ ಪರ ವಕೀಲರು ಕಲಂ 311 ಸಿ.ಆರ್.ಪಿ.ಸಿ ಅಡಿಯಲ್ಲಿ ಹಾಕಿಕೊಂಡ ಅರ್ಜಿಯ ಮೇಲೆ ದಿನಾಂಕ 10.04.2026 ರಂದು ಆದ ಆದೇಶದ ಪ್ರಕಾರ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 19.06.2026**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

6. ಘಟನೆ ಆದ ಒಂದುವರೆ ಗಂಟೆ ನಂತರ ಗಾಯಾಳುಗಳು ನನ್ನ ಬಳಿ ಚಿಕಿತ್ಸೆಗಾಗಿ ಬಂದಿರುತ್ತಾರೆ. ಗಾಯಾಳುಗಳು ತಾವು ಬೇರೆ ಕಡೆ ಹೋಗಿ ಚಿಕಿತ್ಸೆ ಪಡೆದ ಬಗ್ಗೆ ಹೇಳಿರುವುದಿಲ್ಲ. ನಾನು ಅವರಿಗೆ ಚಿಕಿತ್ಸೆ ಕೊಟ್ಟ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಕಡೆ ಶಿಫಾರಸ್ಸು ಮಾಡಿರುವುದಿಲ್ಲ. ಆದರೆ ಗಾಯಾಳು ಸತೀಶ್ ಎನ್ನುವವರನ್ನು ಮೂಳೆ ತಜ್ಞರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಶಿಫಾರಸ್ಸು ಮಾಡಿರುತ್ತೇನೆ. 3 ಜನ ಗಾಯಾಳುಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ.

7. ಎಂ.ಎಲ್.ಸಿ. ರಿಜಿಸ್ಟರ್ ನಲ್ಲಿ ಗಾಯಾಳುಗಳು ಹೇಳಿದ ಪ್ರಕಾರ ನಮೂದು ಮಾಡಿರುತ್ತೇವೆ ಎಂದರೆ ಸಾಕ್ಷಿಯು ಗಾಯಾಳುಗಳು ಹೇಳಿರುವುದಿಲ್ಲ, ಆದರೆ ನಾವು ಪರೀಕ್ಷೆ ಮಾಡಿ ಅವರ ಮೈ ಮೇಲೆ ಕಂಡ ಗಾಯಗಳ ಬಗ್ಗೆ ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ನಮೂದು ಮಾಡಿರುತ್ತೇವೆ ಎಂದು ಹೇಳುತ್ತಾರೆ. ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ಗಾಯಾಳುಗಳಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. ಗಾಯಾಳುಗಳು ತಮಗೆ ಡ್ರ್ಯಾಗರ್ ನಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ.

8. ಡ್ರ್ಯಾಗರ್ ಅನ್ನು ಗಾಯಾಳುಗಳು ಚಿಕಿತ್ಸೆ ಪಡೆಯುವ ಕಾಲಕ್ಕೆ ಅಥವಾ ನಂತರದಲ್ಲಿ ನನ್ನ ಮುಂದೆ ಹಾಜರು ಪಡಿಸಿದ ಬಗ್ಗೆ ನೆನಪಿರುವುದಿಲ್ಲ. 3 ಜನ ಗಾಯಾಳುಗಳ ಗಾಯದ ಪ್ರಮಾಣ ಪತ್ರದಲ್ಲಿ ಕೇವಲ ಹಲ್ಲೆ ಎಂದು ನಮೂದು ಮಾಡಿದ್ದು ಬಿಟ್ಟರೆ ಯಾವ ಆಯುಧದಿಂದ ಮತ್ತು ಯಾರು ಹಲ್ಲೆ ಮಾಡಿರುತ್ತಾರೆ ಎಂದು ಉಲ್ಲೇಖ ಇರುವುದಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಈ ವಿವರಗಳನ್ನು ಬರೆಯಬೇಕೆಂದು ಕಡ್ಡಾಯವಿರುವುದಿಲ್ಲ ಎಂದು ಹೇಳುತ್ತಾರೆ.

9. ಗಾಯಾಳುಗಳ ಗಾಯದ ಪ್ರಮಾಣ ಪತ್ರದಲ್ಲಿ ಸದರಿ ಗಾಯಗಳು ಹಳೆಯ ಗಾಯಗಳಾಗಿರುತ್ತವೋ ಅಥವಾ ಹೊಸದಾಗಿ ಆಗಿರುವ ಗಾಯಗಳು ಆಗಿರುತ್ತವೆಯೋ ಎಂದು ನಮೂದು ಮಾಡಿರುವುದಿಲ್ಲ ಎಂದರೆ ನಿಜ. 3 ಜನ ಗಾಯಾಳುಗಳ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ನಿಜ. ತನಿಖಾಧಿಕಾರಿಗಳು ನನ್ನ ಮುಂದೆ ಡ್ರ್ಯಾಗರ್ ಅನ್ನು ಹಾಜರು ಮಾಡಿ ಗಾಯಾಳುಗಳಿಗೆ ಆಗಿರುವ ಗಾಯಗಳು ಸದರಿ ಡ್ರ್ಯಾಗರ್ ನಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆಯೋ ಎನ್ನುವ ಬಗ್ಗೆ ಅಭಿಪ್ರಾಯ ಕೋರಿಕೊಂಡಿರುವುದಿಲ್ಲ.

10. ಗಾಯದ ಪ್ರಮಾಣ ಪತ್ರವನ್ನು ನೀಡುವುದಕ್ಕಿಂತ ಮೊದಲು ಗಾಯಾಳುಗಳು ಯಾವತ್ತು ನನ್ನ ಮುಂದೆ ಡ್ರ್ಯಾಗರ್ ಅನ್ನು ಹಾಜರು ಪಡಿಸಿರುವುದಿಲ್ಲ. 3 ಜನ ಗಾಯಾಳುಗಳಿಗೆ ಆಗಿರುವ ಗಾಯಗಳು ಬೈಕಿನಲ್ಲಿ ಹೋಗುತ್ತಿದ್ದಾಗ ಬಿದ್ದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ನಿಜ. ದಿನಾಂಕ 11.03.2023 ರಂದು ನಾನು ಗಾಯಾಳುಗಳನ್ನು ಪರೀಕ್ಷಿಸಿದಾಗ ಅವರಿಗೆ ಆಗಿರುವ ಗಾಯಗಳು ಹಳೆಯ ಗಾಯಗಳು ಆಗಿದ್ದು ಅವರ ಕೋರಿಕೆಯ ಮೇರೆಗೆ ಸದರಿ ಗಾಯಗಳು ಹೊಸದಾಗಿ ಆಗಿರುವ ಗಾಯಗಳು ಎಂದು ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

11. ನಾನು ಗಾಯಾಳುಗಳಿಗೆ ಯಾವುದೇ ಚಿಕಿತ್ಸೆ ನೀಡದೆ ಗಾಯಾಳುಗಳ ಹೇಳಿಕೆ ಮೇರೆಗೆ ಗಾಯದ ಪ್ರಮಾಣ ಪತ್ರದಲ್ಲಿ ಮತ್ತು ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ಸುಳ್ಳು ವಿವರಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಗಾಯಾಳುಗಳ

ಕೋರಿಕೆಯ ಮೇರೆಗೆ ಗಾಯದ ಪ್ರಮಾಣ ಪತ್ರ ಮತ್ತು ಇನ್ನಿತರೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಇ.

**(ಮಧ್ವೇಶ ಡಬೇರ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.